**ದಿನಾಂಕ** 02-04-2026 **ರಂದು ಸಾಕ್ಷಿಯನ್ನು ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ–2 ನೇ ಎದುರುದಾರರ ಪರ ಶ್ರೀ ಕೆ ಆರ್ ಎನ್ ವಕೀಲರಿಂದಃ–**

ಕುಪ್ಪೆಕೊಳಗಟ್ಟ ಗ್ರಾಮದ ಭೂಸ್ವಾಧೀನವಾದ ನನ್ನ ಜಮೀನಿನ ಸರ್ವೇ ನಂ. 33/86 ರಲ್ಲಿ 4 ಎಕರೆ ಸ್ವಾಧೀನಪಡಿಸಿಕೊಂಡಿದ್ದಾರೆ. ಸದರಿ ಜಮೀನನ್ನು ರಕ್ಷಣಾ ಇಲಾಖೆಯವರು ಸ್ವಾಧೀನಪಡಿಸಿಕೊಂಡಿದ್ದಾರೆ. ಸದರಿ ಜಮೀನು ನನ್ನ ತಂದೆ ಪೊನ್ನಪ್ಪ ಹೆಸರಿನಲ್ಲಿತ್ತು. ನನ್ನ ತಂದೆಗೆ ಇಬ್ಬರು ಮಕ್ಕಳು. ನನ್ನ ಸಹೋದರ ನನಗೆ ಯಾವುದೇ ಅಧಿಕಾರಿ ಪತ್ರ ಕೊಟ್ಟಿಲ್ಲ ಎಂದರೆ ಸರಿ. ಸದರಿ ಜಮೀನನ್ನು ಸ್ವಾಧೀನಪಡಿಸಿಕೊಂಡ ಬಗ್ಗೆ ಪರಿಹಾರದ ಹಣ ಪಡೆದಿದ್ದೇವೆ ಎಂದರೆ ಸರಿ. ನಾನು ಈ ಪ್ರಕರಣದಲ್ಲಿ ಹಾಜರು ಮಾಡಿರುವ **LAC(A) 3/2021** ರಲ್ಲಿ ಸ್ವಾಧೀನಪಡಿಸಿಕೊಂಡಿರುವ ಜಮೀನನ್ನು ಕಾವೇರಿ ನೀರಾವರಿ ನಿಗಮದವರು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದರೆ ಸರಿ. ಜಯಣ್ಣನಾಯಕ ನಮ್ಮ ಊರಿನವರು. ಸದರಿ ಜಯಣ್ಣ ಸ್ವಾಧೀನಪಡಿಸಿಕೊಂಡ ಜಮೀನಿಗೆ ಸಂಬಂಧಪಟ್ಟಂತೆ ಆಗಿರುವ ಆದೇಶವನ್ನು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ MFA NO 1021/1999 ರಲ್ಲಿ ಮೇಲ್ಮನವಿ ಮಾಡಿ ಪ್ರಶ್ನೆ ಮಾಡಿದ್ದರು ಎಂದರೆ ಸರಿ. ಸದರಿ ಪ್ರಕರಣದಲ್ಲಿ ಎಲ್ಲ ಅಂಶಗಳ್ನು ಪರಿಗಣಿಸಿ ಆದೇಶ ಮಾಡಿದ್ದಾರೆ ಎಂದರೆ ಸರಿ . ಸದರಿ ಆದೇಶವನ್ನು ಪ್ರಶ್ನೆ ಮಾಡಿ ಈ ಪ್ರಕರಣದ 2 ನೇ ಪ್ರತಿವಾದಿ ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ Spl.Leave petition No. 11755/2000 ರಂತೆ ಸಲ್ಲಿಸಿದ ಮೇಲ್ಮನವಿ ವಜಾ ಆಗಿದೆ ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ಅಕ್ಕಪಕ್ಕದ ಜಮೀನಿನ ಮಾಲೀಕರು MFA NO 1021/1999 ರಲ್ಲಿ ಆಗಿರುವ ಆದೇಶದಂತೆ ರಾಜಿ ಸಂದಾನ ಮೂಲಕ ಬರೆಹರಿಸಿಕೊಂಡು ಪರಿಹಾರ ಪಡೆದರು ಎಂದರೆ ಸರಿ .ಈಗಾಗಲೇ ಮಾನ್ಯ ಉಚ್ಚ ನ್ಯಾಯಾಲಯ ಮತ್ತು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ವ್ಯಾಜ್ಯ ಬರೆಹರಿದಿರುವುದರಿಂದ ನಾವು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಮಾಡಬೇಕಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡಿಲ್ಲ ಎಂದರೆ ಸರಿ. ನ್ಯಾಯಾಲಯದ ಶುಲ್ಕದಲ್ಲಿ ರಿಯಾಯಿತಿ ಕೋರಿ ಅಥವಾ ನ್ಯಾಯಾಲಯ ಶುಲ್ಕ ಪಾವತಿ ಮಾಡಲು ಸಮಯ ಅವಕಾಶ ಕೋರಿ ನಾನು ಯಾವುದೇ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ಜಮೀನನ್ನು ಸ್ವಾಧೀನ ಪಡಿಸಿಕೊಂಡಿರುವ ಬಗ್ಗೆ ನಾನು ಪಡೆದಿರುವ ಪರಿಹಾರ ಸಮಂಜಸವಾಗಿದ್ದು, ಹೆಚ್ಚಿನ ಪರಿಹಾರ ಪಡೆಯಲು ನಾನು ಅರ್ಹನಲ್ಲ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಹಾಜರು ಮಾಡಿರುವ ದಾಖಲೆಗಳು ಮತ್ತು ತೀರ್ಪಿನ ಪ್ರತಿಗಳು ಈ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರು ಮಾಡಿರುವ ದಾಖಲೆಗಳು ಬೇರೆ ಉದ್ದೇಶಕ್ಕಾಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು , ನನ್ನ ಜಮೀನನ್ನು ಕಾವೇರಿ ನೀರಾವರಿ ನಿಗಮದವರು ಸ್ವಾಧೀನಪಡಿಸಿಕೊಂಡಿರುವುದರಿಂದ ಸದರಿ ದಾಖಲೆಗಳು ಈ ಪ್ರಕರಣಕ್ಕೆ ಅನ್ವಯವಾಗುವುದಿಲ್ಲ ಎಂದರೆ ಸರಿಯಲ್ಲ. ರಕ್ಷಣಾ ಇಲಾಖೆಗೆ ನಷ್ಟ ಉಂಟು ಮಾಡುವ ಉದ್ದೇಶದಿಂದ ನಾನು ಈ ಮೇಲ್ಮನವಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು 4(1) ನೋಟಿಫಿಕೇಶನ್ನ ಪ್ರತಿಯನ್ನು ಹಾಜರು ಮಾಡಿಲ್ಲ ಎಂದರೆ ಸರಿ . ವಿಳಂಬವಾಗಿ ಮೇಲ್ಮನವಿ ಸಲ್ಲಿಸಲು ಸಕಾರಣಗಳನ್ನು ನಮೂದು

ಮಾಡಿಲ್ಲ ಎಂದರೆ ಸರಿಯಲ್ಲ. ಈ ಎಲ್ಲ ಕಾರಣಗಳಿಂದ ಈ ಮೇಲ್ಮನವಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.